# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಸಮಾಜ ಕಲ್ಯಾಣ ಮತ್ತು ಪಶು ಸಂಗೋಪನೆ ಇಲಾಖೆಯ ಅಧಿಕಾರಿ/ಸಿಬ್ಬಂದಿಯವರ ಬಾಕಿ/ಪ್ರಸಕ್ತ ಸಾಲಿನ/ಬಾಕಿ ವೇತನ ಮತ್ತು ಸಂಭಾವನೆಗಾಗಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಆರ್ಥಿಕ ಇಲಾಖೆ ವೆಚ್ಚ 3 ಮತ್ತು 4 ಶಾಖೆಗಳ ಕಡತ ಸಂಖ್ಯೆ: ಆಇ 309 ವೆಚ್ಚ 4/2021 ಮತ್ತು ಆಇ 377 ವೆಚ್ಚ 3/2021 ಮತ್ತು ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಪತ್ರಗಳು

ಪ್ರಸ್ತಾವನೆ:

ವಿವಿಧ ತಾಲ್ಲೂಕು ಪಂಚಾಯತಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ಸಂಭಾವನೆ ಮತ್ತು ನಿವೃತ್ತ ದಿನಗೂಲಿ ನೌಕರರ ಒಂದು ಬಾರಿಯ ಉಪದಾನಕ್ಕಾಗಿ ಲೆಕ್ಕ ಶೀರ್ಷಿಕೆ 2515–00–102–0–63ರಡಿ ಮತ್ತು ಚನ್ನಪಟ್ಟಣ ತಾಲ್ಲೂಕು ಪಂಚಾಯತಿ ವ್ಯಾಪ್ತಿಯ ಪಶು ಸಂಗೋಪನೆ ಇಲಾಖೆಯ ಅಧಿಕಾರಿಗಳ ಬಾಕಿ ವೇತನ ಪಾವತಿಗಾಗಿ ಲೆಕ್ಕ ಶೀರ್ಷಿಕೆ 2403–00–101–0–61–005 ಮತ್ತು ಹಾನಗಲ್ ಹಾಗೂ ಮಳವಳ್ಳಿ ತಾಲ್ಲೂಕು ಪಂಚಾಯತಿಗಳ ವ್ಯಾಪ್ತಿಯ ಹಿಂದುಳಿದ ವರ್ಗಳ ಕಲ್ಯಾಣ ಇಲಾಖೆಯಲ್ಲಿ ತೆರವಾದ ಹುದ್ದೆಗಳು ಭರ್ತಿಯಾದ್ದರಿಂದ ಬಾಕಿ/ಪ್ರಸಕ್ತ ಸಾಲಿನ ವೇತನ ವೆಚ್ಚಕ್ಕಾಗಿ ಲೆಕ್ಕ 2225–00–103–0–74–005 ಮತ್ತು 2225–00–103–0–75–005ರಡಿ ಒಟ್ಟು ರೂ102–58ಲಕ್ಷಗಳನ್ನು ಹೆಚ್ಚುವರಿಯಾಗಿ ಬಿಡುಗಡೆಗೊಳಿಸಲು ಪ್ರಸ್ತಾವಿಸಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಡಿಯ ಪ್ರಸ್ತಾವಿತ ವೆಚ್ಚಕ್ಕಾಗಿ ರೂ75.19ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2515–00–197–1–10–300 ರಡಿ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 448 ವೆಚ್ಚ 6/2021(ಇ) ದಿನಾಂಕ: 6ನೇ ಸೆಪ್ಟೆಂಬರ್ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 2ರ ಜಿಲ್ಲಾ ಪಂಚಾಯತಿಗೆ ಕಾಲಂ 3 ಕಾರ್ಯಕ್ರಮದಡಿ ಬಾಕಿ ವೇತನ ಪಾವತಿಗಾಗಿ ಅಗತ್ಯವಿರುವ ಅನುದಾನವನ್ನು ಕಾಲಂ 4ರ ಲೆಕ್ಕ ಶೀರ್ಷಿಕೆಯಡಿ ರೂ102.58ಲಕ್ಷ (ರೂಪಾಯಿ ಒಂದು ನೂರ ಎರಡು ಲಕ್ಷದ ಐವತ್ತೆಂಟು ಸಾವಿರಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ.

(ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ–2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಪಂಚಾಯತಿ ಮುಖ್ಯಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು ಮರು ಹೊಂದಾಣಿಕೆ ಆದೇಶವನ್ನು ಈ ಕೆಳಗಿನ ಅಧಿಕಾರಿಗಳಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಸಲ್ಲಿಸಿ ಖಜಾನೆಯಲ್ಲಿ ಅಪ್ ಲೋಡ್ ಮಾಡಿಕೊಳ್ಳುವುದು (ಲೆ.ಶೀ.2515–00–102–0–63–034 ಮತ್ತು 251ರಡಿ ಬಿಡುಗಡೆಗೊಳಿಸಿರುವ ಅನುದಾನಕ್ಕೆ ಮರುಹೊಂದಾಣಿಕೆಯ ಅಗತ್ಯವಿರುವುದಿಲ್ಲ. ಸದರಿ ವೆಚ್ಚವನ್ನು ಬಿಡುಗಡೆಗೊಳಿಸಿರುವ ಕಾರ್ಯಕ್ರಮದಡಿ ವೆಚ್ಚ ಭರಿಸತಕ್ಕದ್ದು)

ಬಿಡುಗಡೆಗೊಳಿಸಿದ ಈ ಅನುದಾನವನ್ನು ಪ್ರಸ್ತಾವಿತ ವೆಚ್ಚವನ್ನು ಆದ್ಯತೆಯ ಮೇಲೆ ವೆಚ್ಚ ಮಾಡತಕ್ಕದ್ದು, ಯಾವುದೇ ಹಂತದಲ್ಲಿ ಅಂದರೆ ತಾಲ್ಲೂಕು ಪಂಚಾಯತಿ ಅಥವಾ ಅನುಷ್ಠಾನಾಧಿಕಾರಿಗಳ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು.

| ಕ್ರ.ಸಂ. | ತಾಲ್ಲೂಕು ಪಂಚಾಯತ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ಲೆಕ್ಕ ಶೀರ್ಷಿಕೆ 2515–00–196–1–05ರಡಿ ಬಿಡುಗಡೆಗೊಳಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2 | 3 | 4 |
| 1 | ಚನ್ನಪಟ್ಟಣ | 2403–00–101–0–61–005 | 37.11 |
| 2 | ಹಾನಗಲ್ | 2225–00–103–0–74–005 | 6.92 |
| 3 | ಮಳವಳ್ಳಿ | 2225–00–101–0–75–005 | 4.13 |
| 4 | ಮಡಿಕೇರಿ | 2515–00–102–0–63–033 | 47.9 |
| | | 2515–00–102–0–63–034 | 9.13 |
| 5 | ಸೋಮವಾರಪೇಟೆ | 2515–00–102–0–63–033 | 9.97 |
| | | 2515–00–102–0–63–034 | 9.13 |
| 6 | ವೀರಾಜಪೇಟೆ | 2515–00–102–0–63–033 | 8.20 |
| | | 2515–00–102–0–63–034 | 9.13 |
| | | 2515–00–102–0–63–251 | 4.08 |
| | ಒಟ್ಟು | | **102.58** |

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**

**(ಶ್ರೀಕೃಷ್ಣ ಎನ್. ಬುಗಟ್ಯಾಗೋಳ)**
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ–2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು–2ರವರಿಗೆ
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾ.ಅ.ಪ./ಸಮಾಜ ಕಲ್ಯಾಣ/ಪಶು ಸಂಗೋಪನೆ ಇಲಾಖೆ
5. ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
6. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
7. ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
8. ಸಂಬಂಧಪಟ್ಟ ಜಿಲ್ಲಾ/ಉಪ ಖಜಾನಾಧಿಕಾರಿಗಳು,
9. ರಕ್ಷಾ ಕಡತಕ್ಕೆ 10. ಹೆಚ್ಚುವರಿ ಪ್ರತಿ